# ಸ್ಪಿನ್ Vs ವೇಗ



ಜೇಮ್ಸ್ ಪ್ಯಾಟಿನ್ಸನ್



ರವಿಚಂದ್ರನ್ ಅಶ್ವಿನ್

**ದಕ್ಷಿಣ ಆಫ್ರಿಕಾ ಎದುರು ಟೆಸ್ಟ್ ಸರಣಿ ಗೆದ್ದಿರುವ ಭಾರತ ಕ್ರಿಕೆಟ್ ತಂಡ ಆಸ್ಟ್ರೇಲಿಯಾ ಪ್ರವಾಸಕ್ಕೆ ಸಜ್ಜಾಗಿದೆ. ಹರಿಣಗಳ ಎದುರು ಯಶಸ್ವಿಯಾದ ಸ್ಪಿನ್ ಮೋಡಿ, ಆಸ್ಟ್ರೇಲಿಯಾದಲ್ಲೂ ನಮಗೆ ಜಯ ತಂದುಕೊಡಬಹುದೆ?**

■ **ಪ್ರಮೋದ್ ಜಿ.ಕೆ.**

‘ನಮ್ಮ ತಂಡ ಸ್ಪಿನ್ ಬೌಲಿಂಗ್‌ನಲ್ಲಿ ತುಂಬಾ ಚುರುಕಾಗಿದೆ. ಪಂದ್ಯದ ದಿಕ್ಕನ್ನೇ ಬದಲಿಸಬಲ್ಲ ಸ್ಪಿನ್ನರ್‌ಗಳು ನಮ್ಮಲ್ಲಿದ್ದಾರೆ...’

–ಕಳೆದ ತಿಂಗಳು ದಕ್ಷಿಣ ಆಫ್ರಿಕಾ ಎದುರು ನಾಲ್ಕು ಪಂದ್ಯಗಳ ಟೆಸ್ಟ್ ಸರಣಿ ಗೆದ್ದ ಬಳಿಕ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮಾಧ್ಯಮಗಳ ಎದುರು ಹೀಗೆ ಹೇಳಿದ್ದರು. ಟೆಸ್ಟ್ ಸರಣಿ ಗೆಲ್ಲಲು ಕಾರಣರಾದ ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜಾ ಅವರನ್ನು ಮನತುಂಬಿ ಹೊಗಳಿದ್ದರು.

ಸ್ಪಿನ್ ತಂತ್ರವನ್ನು ಮುಂದಿಟ್ಟುಕೊಂಡು ಹರಿಣಗಳ ತಂಡವನ್ನು ಟೆಸ್ಟ್ ಸರಣಿಯಲ್ಲಿ ಸೋಲಿಸಿದ್ದು ಕೊಹ್ಲಿ ಪಡೆಯ ಶ್ರೇಷ್ಠ ಸಾಧನೆಯೇ ಸರಿ. ಏಕೆಂದರೆ ದಕ್ಷಿಣ ಆಫ್ರಿಕಾ ಎದುರು ಭಾರತ ತಂಡ ತವರಿನಲ್ಲಿ ಹನ್ನೊಂದು ವರ್ಷಗಳಿಂದ ಒಮ್ಮೆಯೂ ಸರಣಿ ಗೆದ್ದಿರಲಿಲ್ಲ. ಆದ್ದರಿಂದ ಈ ಬಾರಿ ಸರಣಿ ಗೆದ್ದಿದ್ದು ಭಾರಿ ಪ್ರಚಾರ ಪಡೆದುಕೊಂಡಿತು. ಸ್ಪಿನ್ನರ್‌ಗಳಾದ ಅಶ್ವಿನ್ ಮತ್ತು ಜಡೇಜಾ ಸೇರಿ ಒಟ್ಟು 54 ವಿಕೆಟ್‌ಗಳನ್ನು ಕಬಳಿಸಿ ಭಾರತದ ಪಾಲಿಗೆ ಹೀರೋಗಳಾದರು.

ಇದರಿಂದ ಸಹಜವಾಗಿ ಅಭಿಮಾನಿಗಳ ಖುಷಿಯೂ ಹೆಚ್ಚಾಯಿತು. ಕೊಹ್ಲಿ ನಾಯಕರಾದ ಬಳಿಕ ಭಾರತ ಟೆಸ್ಟ್ ತಂಡದ ಅದೃಷ್ಟವೇ ಬದಲಾಗಿದೆ ಎಂದು ಕೆಲವರು ಹೊಗಳಿದರು. ಆದರೆ, ಕೊಹ್ಲಿ ‘ಸ್ಪಿನ್ ತಂತ್ರ’ ಕೆಲ ಕ್ರಿಕೆಟ್ ಪಂಡಿತರ ಟೀಕೆಗೆ ಗುರಿಯಾಯಿತು.

ಐದು ದಿನ ಪೂರ್ಣಗೊಳ್ಳುವ ಮೊದಲೇ ಪಂದ್ಯ ಮುಗಿದ ಕಾರಣ ಮೊಹಾಲಿ ಮತ್ತು ನಾಗಪುರದ ಪಿಚ್‌ಗಳು ವಿವಾದಕ್ಕೆ ಒಳಗಾದವು. ‘ಕೊಹ್ಲಿ ಸ್ಪಿನ್ನರ್‌ಗಳನ್ನು ಮುಂದಿಟ್ಟುಕೊಂಡು ಪಂದ್ಯ ಗೆಲ್ಲುವುದಾದರೆ ವೇಗಿಗಳು ಎಲ್ಲಿಗೆ ಹೋಗಬೇಕು’ ಎನ್ನುವ ಪ್ರಶ್ನೆಯೂ ಕೇಳಿ ಬಂದಿತು. ತವರಿನ ಪಿಚ್‌ನ ‘ಲಾಭ’ ಪಡೆದು ಭಾರತ ಸರಣಿ ಗೆಲ್ಲಬಹುದೇನೋ? ಆದರೆ ವಿದೇಶಿ ನೆಲದಲ್ಲಿ ವೇಗಿಗಳ ಸವಾಲು ಹೇಗೆ ಎದುರಿಸುತ್ತದೆ ಎನ್ನುವ ಪ್ರಶ್ನೆಗಳೂ ತೂರಿ ಬಂದವು.

ಈಗ ಅಂಥದ್ದೊಂದು ಸವಾಲು ಎದುರಾಗಿದೆ. ಭಾರತ ತಂಡ ಐದು ಏಕದಿನ ಮತ್ತು ಮೂರು ಟ್ವೆಂಟಿ–20 ಪಂದ್ಯಗಳ ಸರಣಿ ಆಡಲು ಆಸ್ಟ್ರೇಲಿಯಾಕ್ಕೆ ತೆರಳಲಿದೆ. ಜನವರಿ 12ರಂದ ಆರಂಭವಾಗಲಿರುವ ಸರಣಿಯಲ್ಲಿ ಭಾರತ ಮತ್ತೆ ಸ್ಪಿನ್ ತಂತ್ರಕ್ಕೆ ಮೊರೆ ಹೋಗಲು ಸಿದ್ಧಗೊಳ್ಳುತ್ತಿದೆ. ಆದರೆ ಕಾಂಗರೂಗಳ ನಾಡಿನವರು ದೋನಿ ನಾಯಕತ್ವದ ತಂಡವನ್ನು ಹೆಣೆಯಲು ‘ವೇಗ’ದ ಬಲೆ ನಿರ್ಮಿಸಿದ್ದಾರೆ. ಇದು ಆಸ್ಟ್ರೇಲಿಯಾದ ಶಕ್ತಿಯೂ ಹೌದು. ಸ್ಪಿನ್ ಬೌಲಿಂಗ್‌ನ ದೌರ್ಬಲ್ಯವನ್ನು ಮುಚ್ಚಿಕೊಳ್ಳುವ ಪ್ರಯತ್ನವೂ ಹೌದು.

ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ದೇಶಗಳ ಪಿಚ್‌ಗಳು ವೇಗಿಗಳಿಗೆ ನೆರವಾಗುತ್ತವೆ. ಆದ್ದರಿಂದಲೇ ಆ ದೇಶಗಳು ಮಿಷೆಲ್ ಜಾನ್ಸನ್, ಮಿಷೆಲ್ ಸ್ಟಾರ್ಕ್, ಟ್ರೆಂಟ್ ಬೌಲ್ಟ್, ಡೌಗ್ ಬ್ರಾಸೆವೆಲ್, ಟಿಮ್ ಸೌಥಿ, ಆ್ಯಡಮ್ ಮಿಲ್ನೆ, ಸ್ಟೀವನ್ ಫಿನ್ ಅವರಂಥ ಶ್ರೇಷ್ಠ ವೇಗಿಗಳನ್ನು ಹೊಂದಿವೆ.

ಆದರೆ ಭಾರತ ತಂಡದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ಥಿರ ಪ್ರದರ್ಶನ ನೀಡುವ ವೇಗಿಗಳ ಕೊರತೆ ಕಾಡುತ್ತಿದೆ. ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಗೆ ಆಯ್ಕೆಯಾಗಿರುವ ವೇಗಿಗಳಲ್ಲಿ ಇಶಾಂತ್ ಶರ್ಮಾ, ಉಮೇಶ್ ಯಾದವ್, ಮಹಮ್ಮದ್ ಶಮಿ ಇದ್ದಾರೆ. ಅನುಭವಿ ಆಶಿಶ್ ನೆಹ್ರಾ ಮತ್ತು ಭುವನೇಶ್ವರ್ ಕುಮಾರ್ ಟ್ವೆಂಟಿ–20 ತಂಡಗಳಲ್ಲಿ ಸ್ಥಾನ ಪಡೆದಿದ್ದಾರೆ. ಇವರಲ್ಲಿ ನೆಹ್ರಾ ಮತ್ತು ಇಶಾಂತ್ ಅವರನ್ನು ಹೊರತುಪಡಿಸಿದರೆ ವಿದೇಶಿ ನೆಲದಲ್ಲಿ ಹೆಚ್ಚು ಪಂದ್ಯಗಳನ್ನು ಆಡಿದ ಅನುಭವ ಇರುವ ವೇಗಿಗಳು ಕಡಿಮೆ. ಆಸ್ಟ್ರೇಲಿಯಾ ನೆಲದಲ್ಲಿಯೇ ನಡೆದ ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಯಾದವ್, ಮೋಹಿತ್ ಶರ್ಮಾ, ಶಮಿ ಮಾತ್ರ ಗಮನ ಸೆಳೆದಿದ್ದರು.

ವಿಶ್ವಕಪ್ ಟೂರ್ನಿಗೂ ಮೊದಲು ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಾಲ್ಕು ಪಂದ್ಯಗಳ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿ ನಡೆದಿತ್ತು. ಆಗಲೂ ವೇಗಿಗಳಾದ ಶಮಿ, ಮಿಷೆಲ್ ಜಾನ್ಸನ್, ಹ್ಯಾಜಲ್‌ವುಡ್, ಯಾದವ್, ರ್‍ಯಾನ್ ಹ್ಯಾರಿಸ್ ಹೆಚ್ಚು ವಿಕೆಟ್ ಪಡೆದಿದ್ದರು. ಬಳಿಕ ಆಸ್ಟ್ರೇಲಿಯಾ, ಇಂಗ್ಲೆಂಡ್ ಹಾಗೂ ಭಾರತ ನಡುವೆ ತ್ರಿಕೋನ ಏಕದಿನ ಸರಣಿ ಜರುಗಿತ್ತು. ಆಗಲೂ ವೇಗಿಗಳದ್ದೇ ಪ್ರಾಬಲ್ಯ.

ಆಸ್ಟ್ರೇಲಿಯಾ ತಂಡ ಉತ್ತಮ ವೇಗದ ಬೌಲಿಂಗ್ ಹೊಂದಿದೆಯಾದರೂ, ಸ್ಪಿನ್ನರ್‌ಗಳ ಕೊರತೆ ಎದುರಿಸುತ್ತಿದೆ. ಈ ಮಾತನ್ನು ಆಸೀಸ್ ತಂಡದ ಮಾಜಿ ನಾಯಕ ಇಯಾನ್ ಚಾಪೆಲ್ ಅವರೇ ಒಪ್ಪಿಕೊಂಡಿದ್ದರು. ಇದಕ್ಕೆ ವೆಸ್ಟ್ ಇಂಡೀಸ್‌ನ ಮಾಜಿ ಆಟಗಾರ ಬ್ರಯಾನ್ ಲಾರಾ ಕೂಡ ದನಿಗೂಡಿಸಿದ್ದರು. ಅದರಲ್ಲೂ ಪರ್ತ್, ಬ್ರಿಸ್ಬೇನ್, ಮೆಲ್ಬರ್ನ್, ಕ್ಯಾನ್‌ಬೆರಾ, ಸಿಡ್ನಿ, ಅಡಿಲೇಡ್ ಪಿಚ್‌ಗಳು ವೇಗಿಗಳಿಗೆ ಹೆಚ್ಚು ಸಹಾಯಕಾರಿ. 2015ರ ಆರಂಭದಲ್ಲಿ ನಡೆದ ವಿಶ್ವಕಪ್ ಇದಕ್ಕೊಂದು ಉತ್ತಮ ಉದಾಹರಣೆ. ಹೆಚ್ಚು ವಿಕೆಟ್ ಪಡೆದ ಮೊದಲ ಐವರು ಬೌಲರ್‌ಗಳ ಪಟ್ಟಿಯಲ್ಲಿ ವೇಗಿಗಳೇ ಮುಂಚೂಣಿಯಲ್ಲಿದ್ದಾರೆ. ಮಿಷೆಲ್ ಸ್ಟಾರ್ಕ್, ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ , ಯಾದವ್ , ಶಮಿ, ದಕ್ಷಿಣ ಆಫ್ರಿಕಾದ ಮಾರ್ನೆ ಮಾರ್ಕೆಲ್ ಮತ್ತು ವೆಸ್ಟ್ ಇಂಡೀಸ್‌ನ ಜೆರೋಮ್ ಟೇಲರ್ ಈ ಸ್ಥಾನಗಳನ್ನು ಪಡೆದಿದ್ದರು.



ಮಿಷೆಲ್ ಸ್ಟಾರ್ಕ್



ಜಡೇಜಾ

ಆದ್ದರಿಂದ ಸ್ಪಿನ್ ತಂತ್ರದಿಂದ ಆಸ್ಟ್ರೇಲಿಯಾ ತಂಡವನ್ನು ತವರು ನೆಲದಲ್ಲಿ ಎದುರಿಸುವುದು ಸವಾಲಿನ ಕೆಲಸವೇ ಸರಿ. ಬಲಿಷ್ಠ ಬ್ಯಾಟಿಂಗ್ ಹೊಂದಿರುವ ಭಾರತ ವೇಗಿಗಳ ಎದುರು ನೆಲಕಚ್ಚುತ್ತದೆ. ವಿಶ್ವಕಪ್‌ನ ಸೆಮಿಫೈನಲ್ ಪಂದ್ಯ ಇದಕ್ಕೆ ಸಾಕ್ಷಿ. ಆ ಪಂದ್ಯದಲ್ಲಿ ಭಾರತ ತಂಡ ಆಸ್ಟ್ರೇಲಿಯಾ ಎದುರು 233 ರನ್ ಗಳಿಸುವಷ್ಟರಲ್ಲಿ ಹೈರಾಣಾಗಿತ್ತು. ದೋನಿ ಪಡೆಯ ಎಲ್ಲಾ ವಿಕೆಟ್‌ಗಳನ್ನು ವೇಗಿಗಳೇ ಕಬಳಿಸಿದ್ದರು.

ಭಾರತ ವಿದೇಶಿ ನೆಲದಲ್ಲಿ ಹೆಚ್ಚು ಯಶಸ್ಸು ಕಂಡಿಲ್ಲ. ಆಸೀಸ್‌ನಲ್ಲಿ ಆಡಿದ 43 ಏಕದಿನ ಪಂದ್ಯಗಳಲ್ಲಿ ಗೆದ್ದಿದ್ದು ಹತ್ತರಲ್ಲಿ ಮಾತ್ರ. ಎರಡು ಪಂದ್ಯಗಳಲ್ಲಿ ಫಲಿತಾಂಶ ಬಂದಿಲ್ಲ. ಉಳಿದ 31 ಪಂದ್ಯಗಳಲ್ಲಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾದ್ದೇ ಪ್ರಾಬಲ್ಯ. ಈ ಕಾರಣಕ್ಕಾಗಿಯೇ ಆಸೀಸ್ ಪ್ರವಾಸ ಭಾರತದ ಪಾಲಿಗೆ ಯಾವಾಗಲೂ ಕಬ್ಬಿಣದ ಕಡಲೆ. ಆ ದೇಶದ ಪ್ರವಾಸ ಕೆಲ ಕ್ರಿಕೆಟಿಗರ ನಿವೃತ್ತಿಗೂ ಮುನ್ನುಡಿ ಬರೆದ ಇತಿಹಾಸ ಇದೆ.

2011–12ರಲ್ಲಿ ಆಸ್ಟ್ರೇಲಿಯಾದಲ್ಲಿ ಆಡಿದ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ ಹೀನಾಯವಾಗಿ ಸೋತಿತ್ತು. ಸರಣಿ ಮುಗಿಸಿ ತವರಿಗೆ ವಾಪಾಸಾಗುತ್ತಿದ್ದಂತೆ ರಾಹುಲ್ ದ್ರಾವಿಡ್ ಮತ್ತು ಕಲಾತ್ಮಕ ಬ್ಯಾಟ್ಸ್‌ಮನ್ ವಿ.ವಿ.ಎಸ್ ಲಕ್ಷ್ಮಣ್ ಅವರ ನಿವೃತ್ತಿಗೆ ಒತ್ತಾಯ ಕೇಳಿ ಬಂದಿತ್ತು. ಅದೇ ತಾನೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅಶ್ವಿನ್ ಅವರನ್ನು ಮುಂದಿಟ್ಟುಕೊಂಡು ಸ್ಪಿನ್ ತಂತ್ರ ಹೆಣೆದು ಭಾರತ ವೈಫಲ್ಯ ಅನುಭವಿಸಿತ್ತು. ವೇಗಿಗಳಾದ ಬೆನ್ ಹಿಲ್ಫೆನಾಸ್, ಪೀಟರ್ ಸಿಡ್ಲ್, ಜಹೀರ್ ಖಾನ್, ಯಾದವ್, ಜೇಮ್ಸ್ ಪ್ಯಾಟಿನ್‌ಸನ್ ಮಿಂಚಿದ್ದರು.

ಇತಿಹಾಸ ಏನೇ ಇರಲಿ ಅಶ್ವಿನ್ ಮತ್ತು ಜಡೇಜಾ ಶ್ರೇಷ್ಠ ಸ್ಪಿನ್ನರ್‌ಗಳು ಎನ್ನುವುದರಲ್ಲಿ ಅನುಮಾನವೇನಿಲ್ಲ. ಅವರ ‘ತಂತ್ರಗಾರಿಕೆ’ ವಿದೇಶಿ ನೆಲದಲ್ಲಿ ನಡೆಯುವುದು ಅನುಮಾನ. ಈ ಮಾತನ್ನು ಚಾಪೆಲ್ ಒತ್ತಿ ಹೇಳಿದ್ದಾರೆ. ‘ಸದ್ಯದ ಕ್ರಿಕೆಟ್‌ನಲ್ಲಿ ಅಶ್ವಿನ್ ಶ್ರೇಷ್ಠ ಸ್ಪಿನ್ನರ್. ಅವರ ಸ್ಪಿನ್ ಮೋಡಿ ಆಸ್ಟ್ರೇಲಿಯಾದಂಥ ಪಿಚ್‌ಗಳಲ್ಲಿ ನಡೆಯುವುದು ಕಷ್ಟ’ ಎಂದಿದ್ದಾರೆ. ಅವರ ಮಾತಿನಲ್ಲಿ ನೂರಾರು ಅರ್ಥಗಳಿವೆ. ಆದ್ದರಿಂದ ಸರಣಿ ವಿಜಯದ ಖುಷಿಯಲ್ಲಿರುವ ಭಾರತ ಎಚ್ಚರಿಕೆಯ ಹೆಜ್ಜೆ ಇಡುವುದು ಅಗತ್ಯವಿದೆ.